# ಚಿತ್ರಾ

## ಚಿತ್ರ ಪ್ರಪಂಚ!

**ಲಾಕ್‌ಡೌನ್ ಸಮಯದಲ್ಲಿ ಚಿತ್ರ ಬರೆಯುವ ಹವ್ಯಾಸ ಬೆಳೆಸಿಕೊಂಡ ಚಿತ್ರಾಳ ಕುಂಚದಲ್ಲಿ ಹಲವು ವೈವಿಧ್ಯಮಯ ಚಿತ್ತಾರಗಳು ಅರಳಿವೆ.**

**■ ಎಂ.ಎಸ್‌. ಶೋಭಿತ್ ಮೂಡ್ಕಣಿ**

ಈ ಬಾಲಕಿಗೆ ಚಿತ್ರ ಬರೆಯುವ ಹವ್ಯಾಸ. ಸಾಮಾನ್ಯವಾಗಿ ಎಲ್ಲ ಮಕ್ಕಳು ಕೊರೊನಾ ಲಾಕ್‌ಡೌನ್ ಆದಾಗ ಸ್ಮಾರ್ಟ್‌ಫೋನ್ ತೆಗೆದು ವಿಡಿಯೊ ಗೇಮ್ ಆಡುತ್ತಾ ಕಾಲ ಕಳೆದರೆ ಈ ಹುಡುಗಿ ಕುಂಚ ಹಿಡಿದು ವರ್ಣರಂಜಿತ ಚಿತ್ತಾರ ಬಿಡಿಸಲಾರಂಭಿಸಿದಳು. ಜಲವರ್ಣ, ಕಲರ್ ಪೆನ್ಸಿಲ್ ಚಿತ್ರ, ಮಿಶ್ರಮಾಧ್ಯಮ... ಹೀಗೆ ಚಿತ್ರಕಲೆಯ ನಾನಾ ಪ್ರಕಾರಗಳಲ್ಲಿ ತನ್ನ ಸೃಜನಶೀಲತೆ ಪ್ರದರ್ಶಿಸಿದಳು. ಇದರ ಫಲವೇ ಹತ್ತಾರು ಚಿತ್ರಗಳು ಗಮನಸೆಳೆದವು.

ಈಕೆಯ ಹೆಸರು ಚಿತ್ರಾ ಬೊಮ್ನಳ್ಳಿ. ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಬೊಮ್ನಳ್ಳಿಯ ವ್ಯಂಗ್ಯಚಿತ್ರಕಾರ ಜಿ.ಎಂ. ಬೊಮ್ನಳ್ಳಿ ಮತ್ತು ಅರ್ಚನಾ ಬೊಮ್ನಳ್ಳಿ ದಂಪತಿಯ ಮಗಳು. ಭೈರುಂಬೆಯ ಶಾರದಾಂಬಾ ಆಂಗ್ಲಮಾಧ್ಯಮ ಹೈಸ್ಕೂಲಿನಲ್ಲಿ ಹತ್ತನೇ ತರಗತಿ ಮುಗಿಸಿದ ಈಕೆ ಕಲೆಯ ಅಭಿವ್ಯಕ್ತಿಯನ್ನೇ ಹವ್ಯಾಸ ಮಾಡಿಕೊಂಡಿದ್ದಾಳೆ.

ತಂದೆ ಕೂಡ ವ್ಯಂಗ್ಯಚಿತ್ರಕಾರರಾಗಿರುವುದರಿಂದ ಸಹಜವಾಗಿ ಮಗಳು ಕೂಡ ಕಲೆಯತ್ತ ಆಕರ್ಷಿತಳಾಗಿದ್ದಾಳೆ. ಪರೀಕ್ಷೆಯ ಸಂದರ್ಭದಲ್ಲಿ ಸಹಜವಾಗಿ ಮಕ್ಕಳೂ ಡಿಪ್ರೆಶನ್‌ಗೆ ಒಳಗಾಗುತ್ತಾರೆ. ಆದರೆ ಚಿತ್ರಾ ಬಿಡುವಿದ್ದಾಗ ಚಿತ್ರ ಬರೆವ ಹವ್ಯಾಸ ಬೆಳೆಸಿಕೊಂಡು ಓದು ಹಾಗೂ ಹವ್ಯಾಸ ಎರಡನ್ನೂ ಸಮನಾಗಿ ಮುನ್ನಡೆಸಿಕೊಂಡು ಏಕಾಗ್ರತೆ ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾಳೆ.

ಕೊರೊನಾದಿಂದ ಮಧ್ಯಾಹ್ನದವರೆಗೆ ಆನ್‌ಲೈನ್ ತರಗತಿ ನಡೆದರೆ ಮಧ್ಯಾಹ್ನದ ವೇಳೆ ಚಿತ್ರಾ ಚಿತ್ರ ಬಿಡಿಸಲು ತೊಡಗಿಕೊಂಡಿದ್ದಾಳೆ. ಜೊತೆಗೆ ಚಿತ್ರ ಕಲಿಕೆಯಿಂದ ವಿಜ್ಞಾನ ವಿಷಯಗಳಲ್ಲಿ ಬರುವ ವಿಜ್ಞಾನ ಮಾದರಿಯ ಚಿತ್ರಗಳನ್ನು ಸುಲಭವಾಗಿ ಬಿಡಿಸಲು ಸಹಕಾರಿಯಾಗಿದೆ ಎನ್ನುವುದು ಚಿತ್ರಾ ಅಂಬೋಣ.

ಇತ್ತೀಚಿನ ದಿನಗಳಲ್ಲಿ ಬಿಡುವಿನ ಸಮಯದಲ್ಲಿ ಮೊಬೈಲ್ ದಾಸರಾಗಿ ದಿನದ 24 ಗಂಟೆಯೂ ಅದರಲ್ಲೇ ಮಗ್ನರಾಗಿರುವ ವಿದ್ಯಾರ್ಥಿಗಳ ಮಧ್ಯೆ ಓದಿನ ಜೊತೆ ಉತ್ತಮ ಹವ್ಯಾಸ ರೂಢಿಸಿಕೊಂಡಿರುವ ಚಿತ್ರಾ ನಿಜಕ್ಕೂ ಮಾದರಿಯಾಗಿ ನಿಲ್ಲುತ್ತಾಳೆ. ■


ತನ್ನ ಚಿತ್ರಕಲೆಯೊಂದಿಗೆ ಚಿತ್ರಾ

